# ಭಾಷಾಬೋಧನೆಯಲ್ಲಿ ನೈಜ ಸಾಮಗ್ರಿಗಳು ಮತ್ತು ಸಂವಹನಾತ್ಮಕ ವಿಧಾನ

**ನಿವೇದಿತಾ ವಿ. ಬೆಡದೂರ್**

ಮಗುವೊಂದು ತನ್ನ ಮಾತೃಭಾಷೆಯನ್ನು ಕಲಿವ ಸನ್ನಿವೇಶವೊಂದನ್ನು ಊಹಿಸಿಕೊಳ್ಳೋಣ. ಮಗುವಿನ ಸುತ್ತಲೂ ಅದು ಹರುಕುಮುರುಕು ಪದಗಳನ್ನು ಮಾತನಾಡಿದರೂ ಸಂತಸಪಡುತ್ತ ಮಾತನಾಡಲು ಜನವಿರುತ್ತಾರೆ. ಮಗು ತಪ್ಪುತಪ್ಪಾಗಿ ಮಾತನಾಡಿದರೂ ಚಪ್ಪಾಳೆ ತಟ್ಟುತ್ತ ಸಂಭ್ರಮಿಸುವ ಜನ ಅವರು. ಮಗುವಿನ ಲೋಕವು ಭಾಷಾ ಸಮೃದ್ಧವಾಗಿದೆ! ಆದರೆ ಮಗುವಿನ ಈ ಲೋಕಕ್ಕೂ ತರಗತಿಯೊಳಗಿನ ಲೋಕಕ್ಕೂ ನಡುವೆ ಸೇತುವೆ ಕಟ್ಟಬಹುದೆ? ಭಾಷೆಯ ಸ್ವಾಭಾವಿಕ ಕಲಿಕೆಯ ತತ್ವಗಳನ್ನು ತರಗತಿಯೊಳಗಿನ ಭಾಷಾ ಬೋಧನೆಯಲ್ಲಿ ಅನ್ವಯಿಸಬಹುದೆ? ಮಗುವು ತನ್ನ ಆರಂಭಿಕ ವರ್ಷಗಳಲ್ಲಿ, ಸಾಂಸ್ಕೃತಿಕವಾಗಿ ಸಮೃದ್ಧವಾದ ಪರಿಸರವೊಂದರಲ್ಲಿ ನೋಡುವುದನ್ನು ಮಾಡುವುದನ್ನು ತರಗತಿಯಲ್ಲಿ ಬಳಸಿಕೊಳ್ಳಬಹುದೆ?

ಭಾಷಾ ಬೋಧನೆಯ ಸಾಂಪ್ರದಾಯಿಕ ವಿಧಾನಗಳಲ್ಲಿ ಬದಲಾವಣೆಗಳನ್ನು ತರುವ ಉದ್ದೇಶದಿಂದ ಸಂವಹನಾತ್ಮಕ ಭಾಷಾ ಬೋಧನೆಯು ಹುಟ್ಟಿಕೊಂಡಿತು. ಭಾಷಾ ಬೋಧನೆಯನ್ನು ಮಗುವಿನ ಬದುಕು, ಅಸ್ಮಿತೆ ಮತ್ತು ಸಂಸ್ಕೃತಿಗೆ ಹತ್ತಿರವಾಗಿಸುವ ಗುರಿಯನ್ನು ಅದು ಹೊಂದಿದೆ. ಭಾಷಾ ಬೋಧನೆಯ ಸಾಂಪ್ರದಾಯಿಕ ವಿಧಾನಕ್ಕೂ ಸಂವಹನಾತ್ಮಕ ವಿಧಾನಕ್ಕೂ ಇರುವ ವ್ಯತ್ಯಾಸದ ಪ್ರಮುಖ ತತ್ವಗಳನ್ನು ಈ ಕೆಳಗಿನ ಚಾರ್ಟ್ ನಲ್ಲಿ ಹಿಡಿದಿಡಲಾಗಿದೆ.

| **ಸಾಂಪ್ರದಾಯಿಕ ವಿಧಾನ** | **ಉದಾಹರಣೆಗಳು** | **ಸಂವಹನಾತ್ಮಕ ವಿಧಾನ** | **ಉದಾಹರಣೆಗಳು** |
|---|---|---|---|
| ವ್ಯಾಕರಣ ಕೇಂದ್ರಿತ | | ಸಂವಹನ ಕೇಂದ್ರಿತ | |
| ವ್ಯಾಕರಣ ನಿಯಮಗಳನ್ನು ಕಲಿಯುವುದು ಮತ್ತು ವಾಕ್ಯಗಳನ್ನು ಅಭ್ಯಾಸ ಮಾಡುವುದರ ಮೂಲಕ ಕಲಿಸಲಾಗುತ್ತದೆ. | ಎಣಿಸಬಹುದಾದ ಮತ್ತು ಎಣಿಸಲಾಗದ ನಾಮಪದಗಳನ್ನು ಕಲಿಯುವುದು. ಖಾಲಿ ಬಿಟ್ಟ ಸ್ಥಳ ತುಂಬುವುದು. | ತರಗತಿಯಲ್ಲಿ ಗುಂಪುಗಳನ್ನು ರಚಿಸಿಕೊಂಡು ಪರಸ್ಪರ ಸಂವಹನ ಮಾಡುವ ಮೂಲಕ ವ್ಯಾಕರಣವನ್ನು ಕಲಿಯಲಾಗುತ್ತದೆ. ಆ ಸಂವಹನವು ಸಾಂಸ್ಕೃತಿಕ ಸಾಮಗ್ರಿ ಮತ್ತು ಉಪಕರಣಗಳನ್ನು ಬಳಸುತ್ತದೆ | ನಿಮ್ಮ ನೆಂಟರೊಬ್ಬರ ಮದುವೆಯ ಹಿಂದಿನ ದಿನದ ಸಮಾರಂಭವು ನಿಮ್ಮ ಮನೆಯಲ್ಲಿ ನಡೆಯುತ್ತಿದೆ. ನೀವು ಮತ್ತು ನಿಮ್ಮ ಪಾಲಕರು ಅದಕ್ಕಾಗಿ ಅಡುಗೆ ಮಾಡುತ್ತಿದ್ದೀರಿ. ನಿಮ್ಮ ಅಜ್ಜ-ಅಜ್ಜಿಯರು, ಪಾಲಕರೊಂದಿಗೆ ಮಾತನಾಡಿ ಅವಶ್ಯವಿರುವ ಸಾಮಗ್ರಿಗಳ ಪಟ್ಟಿಯೊಂದನ್ನು ತಯಾರಿಸುವುದು. |

| | | | |
|---|---|---|---|
| ಆಲಿಸುವ, ಮಾತನಾಡುವ, ಓದುವ ಮತ್ತು ಬರೆಯುವ ಕೌಶಲಗಳ ಮೇಲೆ ಒತ್ತುಕೊಡಲಾಗುತ್ತದೆ. | ಆಲಿಸುವುದಕ್ಕೆ ಖಾಲಿ ಬಿಟ್ಟ ಸ್ಥಳ ತುಂಬುವುದು. ಮಾತನಾಡುವ ಕೌಶಲಕ್ಕೆ ಸಂಭಾಷಣೆಗಳನ್ನು ಪುನರಾವರ್ತಿಸುವುದು. | ಈ ನಾಲ್ಕೂ ಕೌಶಲಗಳನ್ನು ಒಳಗೊಳ್ಳುವಂತೆ ಗಮನ ನೀಡುವುದು ಮತ್ತು ಆಲೋಚಿಸಲು ಅವಕಾಶಗಳನ್ನು ಒದಗಿಸುವುದು. ಸಾಮಾಜಿಕ ಸಂದರ್ಭಗಳ ಮೇಲೆ ಕೇಂದ್ರೀಕರಿಸುವುದು | ದೂರದರ್ಶನದಲ್ಲಿ ರಸ್ತೆ ಅಪಘಾತಕ್ಕೆ ಸಂಬಂಧಿಸಿದ ವಾರ್ತೆಯನ್ನು ವೀಕ್ಷಿಸುವುದು, ನಿಮ್ಮ ಅನುಭವಗಳನ್ನು ಕುರಿತು ಮಾತನಾಡುವುದು, ಅಪಘಾತಗಳ ಕಾರಣಗಳನ್ನು ಕುರಿತು ಕುಟುಂಬದವರು ಮತ್ತು ಸ್ನೇಹಿತರ ಸಮೀಕ್ಷೆ ನಡೆಸಿ ಮಾಹಿತಿಯನ್ನು ಸಂಗ್ರಹಿಸುವುದು, ಅಪಘಾತಗಳ ಕಾರಣಗಳನ್ನು ಕುರಿತು ಸಂಪಾದಕರಿಗೆ ಪತ್ರ ಬರೆಯುವುದು. |
| ನಿಖರತೆಯ ಮೇಲೆ ಒತ್ತು ಕೊಡುವುದು. | ಉಚ್ಚಾರಣೆಯ ತಪ್ಪುಗಳಿಗೆ, ಕಾಗುಣಿತ ಮತ್ತು ವ್ಯಾಕರಣದ ದೋಷಗಳಿಗೆ ಶಿಕ್ಷೆ ವಿಧಿಸುವುದು. | ಭಾಷೆಯ ನಿರರ್ಗಳತೆಯ ಮೇಲೆ ಒತ್ತು ನೀಡಲಾಗುತ್ತದೆ. ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂದರ್ಭಗಳಲ್ಲಿ ಮಕ್ಕಳು ಪಾಲ್ಗೊಳ್ಳುವಂತೆ ಉತ್ತೇಜಿಸುವುದು ಮತ್ತು ಮಕ್ಕಳ ತಪ್ಪುಗಳ ಕಡೆ ಗಮನ ಕೊಡದೇ ಇರುವುದು. | ತಪ್ಪುಗಳನ್ನು ಕಲಿಕಾ ಪ್ರಕ್ರಿಯೆಯ ಒಂದು ಭಾಗ ಎಂದು ಪರಿಗಣಿಸಲಾಗುತ್ತದೆ. ಸಾಂಸ್ಕೃತಿಕ ಸಂದರ್ಭಗಳನ್ನೊಳಗೊಂಡ ಆಟಗಳಲ್ಲಿ ಯಾವ ಭಯ ಮತ್ತು ಹಿಂಜರಿಕೆಯಿಲ್ಲದೆ ಮಕ್ಕಳು ಭಾಷೆಯನ್ನು ಬಳಸುತ್ತಾರೆ. ನಿಮ್ಮ ಸುತ್ತಲೂ ಇರುವ ಸೂಚನಾಫಲಕಗಳನ್ನು ಗಮನಿಸಿ. ಅಲ್ಲಿ ಏನಿದೆ? ಅವುಗಳಲ್ಲಿರುವ ವಿಷಯವನ್ನು ವರ್ಣಿಸಲು 'ಹೆಸರು-ಜಾಗ-ವಸ್ತು'ವಿನ ಆಟವನ್ನು ಆಡುವುದು. |

**ಸಂವಹನಾತ್ಮಕ ವಿಧಾನ ತರಗತಿಯ ಪ್ರಮುಖ ಅಂಶಗಳು**

ಸಂವಹನಾತ್ಮಕ ವಿಧಾನವನ್ನು ಅನುಸರಿಸುವ ತರಗತಿಯಲ್ಲಿ ಮಕ್ಕಳನ್ನು ಗುಂಪುಗಳಲ್ಲಿ ಅಥವಾ ಜೋಡಿಗಳಲ್ಲಿ ಪರಸ್ಪರ ಮಾತನಾಡಲು ಪ್ರೋತ್ಸಾಹಿಸಲಾಗುತ್ತದೆ ಮತ್ತು ಶಿಕ್ಷಕರು ಗುಂಪಿನಿಂದ ಗುಂಪಿಗೆ ಅಡ್ಡಾಡುತ್ತಾ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತ ಓಡಾಡುತ್ತಾರೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಇದು ಕಲಿಕಾರ್ಥಿಯನ್ನು ಕೇಂದ್ರವಾಗಿರಿಸಿಕೊಂಡ ತರಗತಿ. ಇಲ್ಲಿ ಶಿಕ್ಷಕಿ ಸುಗಮಕಾರರೂ ಕಲಿಕಾರ್ಥಿಯೂ ಆಗಿರುತ್ತಾರೆ. ಶಿಕ್ಷಕಿಯು ವಿದ್ಯಾರ್ಥಿಗಳಿಗೆ ಅವರ ಮನೆಗಳಲ್ಲಿರುವ ಬದುಕು ಮತ್ತು ಸಂಸ್ಕೃತಿಗಳನ್ನು ನಿಕಟವಾಗಿ ಬಿಂಬಿಸುವ ಒಂದು ಸಮೃದ್ಧ ಭಾಷಾ ಪರಿಸರವನ್ನು ಒದಗಿಸುವ ಉದ್ದೇಶದಿಂದ ಸಂವಹನಾತ್ಮಕ ಅಭ್ಯಾಸ ಚಟುವಟಿಕೆಗಳನ್ನು ನೀಡುತ್ತಾರೆ. ತರಗತಿಯ ಪರಿಸರವು ಸ್ನೇಹಪೂರ್ಣವಾಗಿರುತ್ತದೆ, ವಿದ್ಯಾರ್ಥಿಗಳಿಗೆ ಹೆದರಿಕೆ ಆಗುವುದಿಲ್ಲ,

ಏಕೆಂದರೆ ತಪ್ಪು ಮಾಡಿದರೆ ಶಿಕ್ಷೆ ವಿಧಿಸುವುದಿಲ್ಲ. ಅದಕ್ಕಿಂತ ಹೆಚ್ಚಾಗಿ ಇಲ್ಲಿ ಮಕ್ಕಳು ಮೊದಲ ಸುತ್ತಿನಲ್ಲೇ ತಮ್ಮ ಸಂಗಡಿಗರೊಂದಿಗೆ ಮಾತನಾಡುತ್ತಾರೆ. ಆಮೇಲೆ, ಆತ್ಮವಿಶ್ವಾಸವನ್ನು ಪಡೆದ ನಂತರ ತಮ್ಮ ತಂಡದ ಕೆಲಸವನ್ನು ಇಡೀ ತರಗತಿಯ ಎದುರು ಮಂಡಿಸುತ್ತಾರೆ. ಇದು ಭಾಷೆಯನ್ನು ಬಳಸುವುದಕ್ಕೆ ವಿದ್ಯಾರ್ಥಿಗಳಿಗೆ ಒಂದು ಸುರಕ್ಷಿತ ಪರಿಸರವನ್ನು ಒದಗಿಸುತ್ತದೆ.

**ಸಂವಹನಾತ್ಮಕ ಭಾಷಾ ಬೋಧನಾ ತರಗತಿಯಲ್ಲಿ ಶಿಕ್ಷಕರ ಪಾತ್ರ**

ಸಂವಹನಾತ್ಮಕ ಭಾಷಾ ಬೋಧನಾ ತರಗತಿಯಲ್ಲಿ ಶಿಕ್ಷಕರ ಪಾತ್ರವು ಬಹಳ ಮಹತ್ವದ್ದಾಗಿರುತ್ತದೆ. ಪಾಠದ ಉದ್ದೇಶವನ್ನು ಅವಲಂಬಿಸಿ ಅವರು ತರಗತಿಯಲ್ಲಿ ವಿದ್ಯಾರ್ಥಿಗಳು ಮಾಡಬಹುದಾದಂತಹ ಚಟುವಟಿಕೆಗಳನ್ನು ಯೋಜಿಸುತ್ತಾರೆ. ಈ ಕೆಳಗಿನ ತತ್ವಗಳನ್ನು ಆಧರಿಸಿ ಚಟುವಟಿಕೆಗಳನ್ನು ರೂಪಿಸಲಾಗುತ್ತದೆ:

a) ವಿಷಯವನ್ನು ಕುರಿತು ಮಾತನಾಡಲು ವಿದ್ಯಾರ್ಥಿಗಳಿಗೆ ಹೇರಳ ಅವಕಾಶಗಳಿರಬೇಕು. ಚಿತ್ರಗಳು, ಬೇರೆ ಬೇರೆ ಸ್ಥಳಗಳಿಗೆ ಭೇಟಿ, ಚಿಕ್ಕ ಕತೆಗಳು, ಕರಪತ್ರಗಳು ಮತ್ತು ಜಾಹಿರಾತುಗಳು ಮಕ್ಕಳಿಗೆ ಮಾತನಾಡಲು ಪ್ರಚೋದನೆಯನ್ನು ಒದಗಿಸುತ್ತವೆ. ನಿತ್ಯದ ಬದುಕಿನ ವಿವಿಧ ಪಾತ್ರಗಳನ್ನು ಆವಾಹಿಸಿಕೊಂಡು, ಪಾತ್ರಾಭಿನಯ ಮಾಡುವುದೂ ಸಹ ಅವರಲ್ಲಿ ಇರಬಹುದಾದ ಭಯ ಮತ್ತು ಹಿಂಜರಿಕೆಯನ್ನು ಕಡಿಮೆ ಮಾಡುತ್ತದೆ.
b) ವಿದ್ಯಾರ್ಥಿಗಳು ತಮ್ಮ ವಿಚಾರಗಳನ್ನು ತರಗತಿಯ ಮುಂದಿಡುವ ಮೊದಲು ಅವರಿಗೆ ಓದಲು, ಯೋಚಿಸಲು, ಚರ್ಚಿಸಲು ಮತ್ತು ಟಿಪ್ಪಣಿ ಮಾಡಿಕೊಳ್ಳಲು ಸಮಯ ಬೇಕಾಗುತ್ತದೆ. ಕೇಂದ್ರೀಕೃತ ಓದು ಬೇಕಾಗುತ್ತದೆ. ಪ್ರಶ್ನೆಗಳು, ಸಣ್ಣ ಪುಟ್ಟ ಅಭಿಪ್ರಾಯಗಳು ಅಥವಾ ಚಿತ್ರಗಳು ಪಠ್ಯವೊಂದರ ಉದ್ದೇಶವನ್ನು ಅರ್ಥ ಮಾಡಿಕೊಳ್ಳಲು ಮಕ್ಕಳಿಗೆ ಸಹಾಯ ಮಾಡುತ್ತವೆ. ಇದು ಮುಂದೆ ಅವರಿಗೆ ವಹಿಸಲಾದ ಕಾರ್ಯದ ಅಗತ್ಯಕ್ಕೆ ತಕ್ಕಂತೆ ಯೋಚಿಸಿ ಪ್ರತಿಕ್ರಿಯಿಸುವ ರೂಢಿಯನ್ನು ಅವರಲ್ಲಿ ಬೆಳೆಸುತ್ತದೆ.
c) ಮಗುವಿನ ಮನೆಯ ಜಗತ್ತು ಮತ್ತು ಶಾಲೆಯ ಜಗತ್ತಿನ ನಡುವೆ ಕೊಂಡಿಯನ್ನು ಕಲ್ಪಿಸಲು ತರಗತಿಯ ಚಟುವಟಿಕೆಗಳು ಮಕ್ಕಳ ಮನೆಯ, ಸಮಾಜದ ಮತ್ತು ಅವರ ಸಂಸ್ಕೃತಿಗಳನ್ನು ಪ್ರತಿಫಲಿಸುತ್ತಿರಬೇಕು.
d) ಬರವಣಿಗೆಯನ್ನು ಒಂದು ಪ್ರಕ್ರಿಯೆಯ ರೂಪದಲ್ಲಿ ಕಲಿಸಬೇಕು, ಉತ್ಪಾದನೆಯ ರೂಪದಲ್ಲಲ್ಲ.
e) ವ್ಯಾಕರಣವನ್ನು ಅನುಗಮನ (inductive) ಮತ್ತು ಅನುಮಾನ/ನಿಗಮನ (deductive) –ಎರಡೂ ವಿಧಾನದಲ್ಲಿ ಕಲಿಸಬಹುದು. ಮಕ್ಕಳು ಉದಾಹರಣೆಗಳನ್ನು ಕೊಡಲು ಸಹಾಯ ಮಾಡಿ, ನಂತರ ಅದರಲ್ಲಿರುವ ನಿಯಮವನ್ನು ಅವರು ಊಹಿಸುವಂತೆ/ಕಲಿಯುವಂತೆ ಮಾಡಬಹುದು.

ಶಿಕ್ಷಕಿಯೊಬ್ಬರು ತಮ್ಮ ಬೋಧನೆಯನ್ನು ಹೇಗೆ ಯೋಜಿಸುತ್ತಾರೆ ಮತ್ತು ಸಂಪನ್ಮೂಲಗಳನ್ನು ಹೇಗೆ ಬಳಸಿಕೊಳ್ಳುತ್ತಾರೆ ಎಂಬುದನ್ನು ಈಗ ನೋಡೋಣ:

*ಶಿಕ್ಷಕಿಯು ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸುತ್ತಾರೆ ಮತ್ತು ಅವರಿಗೆ ಮಾಡಲು ಕಾರ್ಯಗಳನ್ನು ಕೊಡುತ್ತಾರೆ. ಇಲ್ಲಿ ಆಕೆಯು ಏನನ್ನು ಪುನರಭ್ಯಾಸ ಮಾಡಿಸಲು ಅಥವಾ ಬೋಧಿಸಲು ಯತ್ನಿಸುತ್ತಿದ್ದಾರೆ?*

ಅದನ್ನು ನೋಡೋಣ.

**i. ಹಂಚಿಕೊಂಡ ಅನುಭವಗಳನ್ನು ಕುರಿತು ಗುಂಪುಗಳು ಮಾತನಾಡುವುದು:**

ಶಿಕ್ಷಕಿಯು ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸುತ್ತಾರೆ ಮತ್ತು ಪ್ರತೀ ಗುಂಪಿಗೂ ಕೆಲಸ ಕೊಡುತ್ತಾರೆ. ವಸ್ತುಗಳನ್ನು ಕಳೆದುಕೊಳ್ಳುವುದನ್ನು ಕುರಿತು ಅವರು ಪರಸ್ಪರ ಮಾತನಾಡಲು, ಅನುಭವಗಳನ್ನು ಹಂಚಿಕೊಳ್ಳಲು ಸೂಚಿಸುತ್ತಾರೆ. ಕಳೆದುಕೊಂಡ ವಸ್ತು ಮರಳಿ ಸಿಕ್ಕದ ಬಗೆಗೂ ಅವರು ಮಾತನಾಡಬೇಕು. ಹಾಗೆ ಮಾತನಾಡಿಕೊಂಡ ನಂತರ ಈ ಕೆಳಗಿನ ಅಭ್ಯಾಸ ಚಟುವಟಿಕೆಯನ್ನು ಅವರು ಮಾಡುತ್ತಾರೆ:

ನಿಮ್ಮ ಗುಂಪು ಆಟದ ಮೈದಾನದಲ್ಲಿ ಆಟವಾಡುತ್ತಿರುವಾಗ ನಿಮ್ಮಲ್ಲೊಬ್ಬರು ತಮ್ಮ ಮೆಚ್ಚಿನ ಚೆಂಡು, ಪೆನ್, ಪರ್ಸು, ಆಟದ ಸಾಮಾನು ಅಥವಾ ಮತ್ತಿನ್ನೇನನ್ನೋ ಕಳೆದುಕೊಂಡಿದ್ದಾರೆ. ನೀವದನ್ನು 'ಕಳೆದುಹೋದ ವಸ್ತುಗಳ ವಿಭಾಗ'ದ ಮೇಲ್ವಿಚಾರಕರಿಗೆ ವರದಿ ಮಾಡಬೇಕು. ಆಗ ಅದನ್ನು ವರ್ಣಿಸಬೇಕು. ಕಳೆದುಹೋದ ವಸ್ತುವಿನ ಬಣ್ಣ, ಗಾತ್ರ, ಆಕಾರ, ಅದು ಯಾವುದರಿಂದ ಮಾಡಿದೆ, ಅದರ ಉಪಯೋಗ, ಅದನ್ನು ಖರೀದಿಸಿದ ದಿನಾಂಕ ಮತ್ತು ದಿನ, ಅದು ಹಾಳಾಗಿತ್ತೇ ಅಥವಾ ತರಚಿಹೋಗಿತ್ತೇ ಇತ್ಯಾದಿ ಎಲ್ಲ ವಿವರಗಳನ್ನೂ ನೀವು ಉಲ್ಲೇಖಿಸಬೇಕು.

ii. **ಗುಂಪಿನ ಕೆಲಸದ ಆಧಾರದ ಮೇಲೆ ಪಾತ್ರಾಭಿನಯ:**
ವಿದ್ಯಾರ್ಥಿಗಳ ಗುಂಪುಗಳನ್ನು ಮಾಡಿದ ನಂತರ ಈ ಕೆಳಗಿನ ಕೆಲಸಗಳನ್ನು ನೀಡಲಾಗುತ್ತದೆ.

ಪ್ರತೀ ಗುಂಪಿನಿಂದ ಒಬ್ಬರು ವಸ್ತುವನ್ನು ಕಳೆದುಕೊಂಡ ವಿದ್ಯಾರ್ಥಿಯ ಪಾತ್ರವನ್ನು ನಿರ್ವಹಿಸುತ್ತಾರೆ. ಮೊದಲ ಪ್ರಸ್ತುತಿಯಲ್ಲಿ ಶಿಕ್ಷಕರು 'ಕಳೆದು ಹೋದ ವಸ್ತುಗಳ ವಿಭಾಗ'ದ ಮೇಲ್ವಿಚಾರಕ ವ್ಯಕ್ತಿಯ ಪಾತ್ರವನ್ನು ನಿರ್ವಹಿಸುತ್ತಾರೆ. ವಸ್ತುವಿನ ಬಣ್ಣ, ಗಾತ್ರ ಇತ್ಯಾದಿ ವಿವರಗಳನ್ನು ಕುರಿತು ಪ್ರಶ್ನಿಸುತ್ತ ಶಿಕ್ಷಕರು ವಿದ್ಯಾರ್ಥಿಯು ಕಳೆದುಕೊಂಡ ವಸ್ತುವನ್ನು ವರ್ಣಿಸಲು ಸಹಾಯ ಮಾಡುತ್ತಾರೆ. ನಂತರದ ಪ್ರಸ್ತುತಿಯಲ್ಲಿ ವಿದ್ಯಾರ್ಥಿಗಳ ಗುಂಪಿನಿಂದ ಯಾರಾದರೊಬ್ಬರು ಮೇಲ್ವಿಚಾರಕ ವ್ಯಕ್ತಿಯ ಪಾತ್ರವನ್ನು ನಿರ್ವಹಿಸುತ್ತಾರೆ.

iii. **ಪ್ರಚೋದನಾತ್ಮಕ ಬುದ್ಧಿಮತ್ತೆ (brainstorming) ಮತ್ತು ಬರವಣಿಗೆ:**
ಮೇಲಿನ ಎರಡು ಚರ್ಚೆಗಳಿಂದ ಸಂಗ್ರಹಗೊಂಡ ಪದಗಳನ್ನು ಶಿಕ್ಷಕರು ಕಪ್ಪುಹಲಗೆಯ ಮೇಲೆ ಬರೆಯುತ್ತಾರೆ. ನೋಟೀಸ್ ಒಂದನ್ನು ಬರೆಯಲು ಹೇಗೆ ಪ್ರಾರಂಭಿಸಬೇಕು ಎಂಬ ವಾಕ್ಯ ರಚನೆಗಳನ್ನು ಅವರು ಚರ್ಚಿಸುತ್ತಾರೆ. ಶಾಲೆಯ ಸೂಚನಾ ಫಲಕದಿಂದ ಆಯ್ದ ಒಂದು ಮಾದರಿ ನೋಟೀಸ್ ಅನ್ನು ಅವರು ವಿದ್ಯಾರ್ಥಿಗಳಿಗೆ ಹಂಚುತ್ತಾರೆ. ನೋಟೀಸ್ ನ ರೂಪರೇಷೆ ಹೇಗಿರಬೇಕೆಂಬುದನ್ನು ಅವರು ಚರ್ಚಿಸುತ್ತಾರೆ. ನಂತರ ಪ್ರತೀ ಗುಂಪಿಗೂ ಸಹಾಯ ಮಾಡುತ್ತ ಕಳೆದುಹೋದ ವಸ್ತುವನ್ನು ವರ್ಣಿಸಿ ಒಂದು ನೋಟೀಸ್ ಬರೆಯಲು ವಿದ್ಯಾರ್ಥಿಗಳಿಗೆ ಹೇಳುತ್ತಾರೆ.

iv. **ತಿಳಿದಿರುವುದರಿಂದ ತಿಳಿಯದಿರುವುದಕ್ಕೆ ಚಿತ್ರಗಳ ಮೂಲಕ ಸೇತುವೆ ಕಟ್ಟುವುದು:**
ನಂತರ ಶಿಕ್ಷಕಿಯು ಪದಗಳ ಪಟ್ಟಿಯಿಂದ ವಿಶೇಷಣಗಳಾಗಿಯೂ ಕ್ರಿಯಾಪದಗಳಾಗಿಯೂ ಬಳಸಬಹುದಾದ ಪದಗಳನ್ನು ಆಯ್ಕೆ ಮಾಡುತ್ತಾರೆ: torn, scratched, broken, injured ಇತ್ಯಾದಿ, ನಂತರ ವೃತ್ತಪತ್ರಿಕೆಯಲ್ಲಿ ಕೊಟ್ಟ ಅಪಘಾತವೊಂದರ ಚಿತ್ರವನ್ನು ಬಿಡಿಸಲು ವಿದ್ಯಾರ್ಥಿಗಳಿಗೆ ಆಕೆ ಸಹಾಯ ಮಾಡುತ್ತಾರೆ. ಆನಂತರ ಭೂತ ಕೃದಂತಗಳನ್ನು (past participles)

ವಿಶೇಷಣಗಳಾಗಿಯೂ, ನಾಮಪದಗಳಾಗಿಯೂ ಹೇಗೆ ಬಳಸಬಹುದೆಂಬುದನ್ನು ಹೇಳಿಕೊಡುತ್ತಾರೆ.

*ಯೋಚಿಸಿ: ಶಿಕ್ಷಕಿಯು ವಿವರಣೆಯೊಂದರ ಬಗೆಗೆ ಮಕ್ಕಳಿಗೆ ಮೊದಲು ಚರ್ಚಿಸಲು ಅವಕಾಶ ಕೊಟ್ಟು, ಅದರ ಬಗ್ಗೆ ಇನ್ನೂ ಹೆಚ್ಚು ಯೋಚಿಸುವಂತೆ ಮಾಡಿ ನಂತರ ನೋಟೀಸ್ ಬರೆಯಲು ಹೇಳಿದ್ದು ಏಕೆ?*

**ಸಂವಹನಾತ್ಮಕ ಭಾಷಾ ಬೋಧನೆಯಲ್ಲಿ ಸಾಮಾನ್ಯವಾಗಿ ಬಳಸಲಾಗುವ ಸಾಮಗ್ರಿಗಳು ಮತ್ತು ಸಂಪನ್ಮೂಲಗಳು:**

- ವ್ಯತ್ಯಾಸಗಳನ್ನು ಹುಡುಕಲು, ವಸ್ತುಗಳನ್ನು ವರ್ಣಿಸಲು, ಕತೆಯೊಂದನ್ನು ಅನುಕ್ರಮವಾಗಿ ಹೇಳಲು ಚಿತ್ರಗಳನ್ನು ಬಳಸಿಕೊಳ್ಳಲಾಗುವುದು.
- ಮಕ್ಕಳು ಭಾಷೆಯನ್ನು ಬಳಸಲು, ಸುಳಿವುಗಳನ್ನು ಒಳಗೊಂಡ ಪಾತ್ರ ನಿರ್ವಹಣೆಯ ಕಾರ್ಡುಗಳು ಸಹಾಯ ಮಾಡುತ್ತವೆ.
- ಭಿತ್ತಿಚಿತ್ರಗಳು(posters), ಪೊಟ್ಟಣವನ್ನು ಸುತ್ತಿರುವ ಲಕೋಟೆಗಳು(wrappers), ವಸ್ತುಗಳ ಹೆಸರುಗಳು(labels), ಜಾಹಿರಾತುಗಳಂತಹ ನೈಜ (authentic) ಸಾಮಗ್ರಿಗಳನ್ನು ಬಳಸಿದರೆ ಮಕ್ಕಳು ತಮಗೆ ಈಗಾಗಲೇ ಗೊತ್ತಿರುವ ಸಂಗತಿಗಳೊಂದಿಗೆ ಸಂಬಂಧ ಕಲ್ಪಿಸಿಕೊಳ್ಳಲು ಅನುಕೂಲವಾಗುತ್ತದೆ.

| **ಜಾಹಿರಾತು** |
|---|
| ಸಾಲು 1: ಭಾವನಾತ್ಮಕವಾಗಿ ಸೆಳೆಯುವಂಥದ್ದು<br>ಸಾಲು 2: ವರ್ಣರಂಜಿತ ವಿವರಣೆ ಅಥವಾ ಉತ್ಪ್ರೇಕ್ಷಿತ ಚಿತ್ರಣ<br>ಸಾಲು 3: ಕೆಲವು ನಿಜ ಸಂಗತಿಗಳು |
| 90% ಭಾವನಾತ್ಮಕವಾಗಿ ಸೆಳೆಯುವಂಥದ್ದು ಮತ್ತು 10% ನಿಜಸಂಗತಿಗಳು |
| **ಜಾಹಿರಾತು** |
| ಸಾಲು 1: ಭಾವನಾತ್ಮಕವಾಗಿ ಸೆಳೆಯುವಂಥದ್ದು<br>ಸಾಲು 2: ವರ್ಣರಂಜಿತ ವಿವರಣೆ ಅಥವಾ ಉತ್ಪ್ರೇಕ್ಷಿತ ಚಿತ್ರಣ<br>ಸಾಲು 3: ಕೆಲವು ನಿಜ ಸಂಗತಿಗಳು |
| 90% ಭಾವನಾತ್ಮಕವಾಗಿ ಸೆಳೆಯುವಂಥದ್ದು ಮತ್ತು 10% ನಿಜಸಂಗತಿಗಳು |

**ವೃತ್ತಪತ್ರಿಕೆಗಳ ವರದಿಗಳು ಮತ್ತು ಜಾಹಿರಾತುಗಳನ್ನು ಬಳಸುವುದು**

ಕಾರ್ಯಾಗಾರವು ಸರಕಾರದಿಂದ ನಡೆಯುವ ವಿದ್ಯಾರ್ಥಿ ಹಾಸ್ಟೆಲ್‌ಗಳ ಪರಿಸ್ಥಿತಿ ಹೇಗಿದೆ ಎನ್ನುವುದರ ಮೇಲಿನ ಸುದ್ದಿಯೊಂದನ್ನು ಏಳನೆಯ ತರಗತಿಯ ಶಿಕ್ಷಕರಿಗೆ ಓದುವುದರ ಮೂಲಕ ಆರಂಭವಾಯಿತು. ಸುದ್ದಿಯೊಂದಿಗೆ ಹಾಸ್ಟೆಲ್‌ನ ವಿದ್ಯಾರ್ಥಿಯೊಬ್ಬನ ಮನಕಲಕುವ ಚಿತ್ರವನ್ನೂ ಒಳಗೊಂಡಿದ್ದ ಅದನ್ನು ಶಿಕ್ಷಕರು ಮತ್ತೊಮ್ಮೆ ಓದಿದರು. ಆನಂತರ ಶಿಕ್ಷಕರು ವಿದ್ಯಾರ್ಥಿ ಹಾಸ್ಟೆಲ್‌ಗಳ ಪರಿಸ್ಥಿತಿಯನ್ನು ಕುರಿತು ವರದಿಯೊಂದನ್ನು ಬರೆದರು. ಆಮೇಲೆ ಶಿಕ್ಷಕರು, ಆರೋಗ್ಯಾಧಿಕಾರಿ, ಹಾಸ್ಟೆಲ್‌ನ ವ್ಯವಸ್ಥಾಪಕ ಮತ್ತು ಚಿಂತಿತ ಪಾಲಕರನ್ನೊಳಗೊಂಡು ನಡೆದ ಪತ್ರಿಕಾಗೋಷ್ಠಿ ಸನ್ನಿವೇಶದ ಪಾತ್ರಾಭಿನಯ ಮಾಡಿದರು. ಶಿಕ್ಷಕರು ತಮ್ಮ ವರದಿಗಳನ್ನು ಮರುಪರೀಕ್ಷಿಸಿದರು, ಹಂಚಿಕೊಂಡರು, ಇನ್ನಷ್ಟು ಸೇರಿಸಿದರು, ತೆಗೆದು ಹಾಕಿದರು ಮತ್ತು ತಮ್ಮ ವರದಿಗಳನ್ನು ತಿದ್ದಿದರು ಮತ್ತೆ ತಿದ್ದಿದರು.

ಮುಂದಿನ ಹಂತದಲ್ಲಿ, ಅವರಿಗೆ CRY ಎಂಬ ಒಂದು ಮಕ್ಕಳ ಹಕ್ಕಿನ ಸಂಸ್ಥೆಯು ಹಣದ ದೇಣಿಗೆ ಕೇಳಿ ಹೊರಡಿಸಿದ್ದ ಜಾಹಿರಾತೊಂದನ್ನು ಅವರಿಗೆ ನೀಡಲಾಯಿತು. ಸ್ವಯಂಪ್ರೇರಿತರಾಗಿ ಹಣ ಸಹಾಯ ಮಾಡಲು ಸಾರ್ವಜನಿಕರನ್ನು ಕೋರುವ ಜಾಹಿರಾತು ಅದಾಗಿತ್ತು. ಮೊದಲಿನ ವರದಿ ಮತ್ತು ಈ ಜಾಹಿರಾತು ಎರಡೂ ಸ್ವರೂಪದಲ್ಲಿ ಹೇಗೆ

ಭಿನ್ನವಾಗಿವೆ ಎಂಬುದನ್ನು ಹೋಲಿಸಿದೆವು. ಅವರೆಡರಲ್ಲಿ ವಾಸ್ತವ ಮತ್ತು ಅಭಿಪ್ರಾಯಗಳ ಪ್ರಮಾಣ ಎಷ್ಟಿದೆ ?

ಜಾಹಿರಾತು ಮತ್ತು ವಾರ್ತಾಪತ್ರಿಕೆಯ ವರದಿಗಳೆರಡನ್ನೂ ಅಕ್ಕಪಕ್ಕದಲ್ಲಿಟ್ಟು ಶಿಕ್ಷಕರು ವಿಶ್ಲೇಷಿಸಿದರು. ಅವರೆಡರ ಸ್ವರೂಪ (ಸಂರಚನೆ) ಭಿನ್ನವಾಗಿದ್ದದ್ದು ನಿಧಾನವಾಗಿ ಅರ್ಥವಾಗುತ್ತಿದ್ದಂತೆ ಇನ್ನೂ ಆಳವಾದ ಗ್ರಹಿಕೆ ಸಿಕ್ಕಿತು. ಒಂದು ಮನಕಲಕುವ ಜಾಹಿರಾತನ್ನು ವೀಕ್ಷಿಸಿಸುವುದರೊಂದಿಗೆ ಚಟುವಟಿಕೆಯು ಕೊನೆಗೊಂಡಿತು. ಇದಾದ ನಂತರ ವರದಿ ಮತ್ತು ಜಾಹಿರಾತನ್ನು ಬರೆಯುವ ಕೆಲಸವು ಸುಲಭವಾಯಿತು!

ಸಾಮರ್ಥ್ಯ ನಿರ್ಮಾಣದ ಈ ಶಿಬಿರದಲ್ಲಿ ಪಾಲ್ಗೊಂಡವರು ಕೊನೆಯಲ್ಲಿ ತಮ್ಮ ಅಭಿಪ್ರಾಯವನ್ನು ಬರೆಯುವಾಗ ತರಗತಿಯಲ್ಲಿ ವಾಸ್ತವ ಬದುಕಿನ ಸಾಮಗ್ರಿಗಳನ್ನು ಬಳಸಬೇಕು ಮತ್ತು ಮಕ್ಕಳಿಗೆ ಬರವಣಿಗೆಯನ್ನು ಕಲಿಸಲು ಸಂವಹನಾತ್ಮಕ ಅಭ್ಯಾಸ ಚಟುವಟಿಕೆಗಳು ಸಹಾಯ ಮಾಡುತ್ತವೆ ಎಂದು ಈಗ ತಮಗೆ ಅರ್ಥವಾಯಿತು ಎಂದು ಬರೆದರು. ಅದರ ಜೊತೆಗೆ ತರಗತಿಯಲ್ಲಿ ಅದನ್ನು ಬಳಸಲು ಒಂದು ಚೌಕಟ್ಟನ್ನೂ ಸಹ ರೂಪಿಸಿಕೊಂಡರು.

## ವೃತ್ತಪತ್ರಿಕೆಯ ಚಿತ್ರಗಳನ್ನು ಬಳಸಿಕೊಂಡು ಬರವಣಿಗೆಯ ಪ್ರಕ್ರಿಯೆಯನ್ನು ಬೆಳೆಸುವುದು

ತರಗತಿಯಲ್ಲಿ ವಾಸ್ತವ ಬದುಕಿನ ಸಂಪನ್ಮೂಲಗಳನ್ನು ಮತ್ತು ಸಂವಹನಾತ್ಮಕ ಭಾಷಾ ಬೋಧನೆಯನ್ನು ಬಳಸುವುದರ ಮೇಲಿನ ಸಾಮರ್ಥ್ಯ ನಿರ್ಮಾಣದ ಅದೇ ಶಿಬಿರದಲ್ಲಿ ಶಿಬಿರಾರ್ಥಿಗಳಿಗೆ ಯಾವುದೇ ಉದ್ದೇಶವಿಲ್ಲದೆ ಜನರು ಮತ್ತು ವಸ್ತುಗಳನ್ನು ಕುರಿತ ಪತ್ರಿಕೆಗಳ ಚಿತ್ರಗಳನ್ನು ನೀಡಲಾಯಿತು. ಎಷ್ಟು ಜನ ಪಾಲ್ಗೊಂಡಿದ್ದರೋ ಅವರ ಮೂರು ಪಟ್ಟು ಹೆಚ್ಚು ಚಿತ್ರಗಳಿದ್ದವು. ಚಿತ್ರಗಳನ್ನು ಮೊದಲು ಕಲೆಸಿ/ಬೆರಸಿ ನಂತರ ಮೂರು ಪ್ರತ್ಯೇಕ ಗುಚ್ಛಗಳನ್ನು ಮಾಡಲಾಯಿತು. ಸಾಧ್ಯವಾದಷ್ಟು ಮಟ್ಟಿಗೆ ಪಾಲ್ಗೊಂಡವರಿಗೆ ನೀಡಿದ ಮೂರೂ ಚಿತ್ರಗಳೂ ಬೇರೆ ಬೇರೆಯಾಗಿರುವಂತೆ ನೋಡಿಕೊಳ್ಳಲಾಯಿತು. ಶಿಬಿರಾರ್ಥಿಗಳು ಚಿತ್ರಗಳನ್ನು ಬಳಸಿ ಕತೆಯನ್ನು ರಚಿಸಬೇಕಿತ್ತು ಮತ್ತು ನಂತರ ಗುಂಪಿನೊಂದಿಗೆ ಅದನ್ನು ಹಂಚಿಕೊಳ್ಳಬೇಕಿತ್ತು. ಅದನ್ನು ಗುಂಪಿಗೆ ಪ್ರಸ್ತುತಿಪಡಿಸಿದ ನಂತರ ಆ ಕತೆಯಲ್ಲಿನ ಅಂಶಗಳು ಮತ್ತು ಕತೆಯ ವಿನ್ಯಾಸವನ್ನು ಕುರಿತ ಚರ್ಚೆ ನಡೆಯಿತು. ಅವುಗಳಲ್ಲಿ ಹೆಚ್ಚಿನ ಕತೆಗಳು ನಿಜವಾದ ಅರ್ಥದಲ್ಲಿ ಕತೆಗಳೇ ಆಗಿರಲಿಲ್ಲ. ಅವುಗಳಲ್ಲಿ ಸಂಘರ್ಷ ಮತ್ತು ಪಾತ್ರ ರಚನೆಯ ಅಂಶಗಳು ಇರಲಿಲ್ಲ. ಕೆಲವು ಕತೆಗಳು ಯಾವುದೋ ಚಲನಚಿತ್ರದ ನಕಲಿನಂತೆ ಇದ್ದವು, ತೀರಾ 'ಸರಳ'ವಾದ ಅಂತ್ಯ, ಪಾತ್ರಗಳ ಹೃದಯ ತೀರಾ ಸುಲಭವಾಗಿ ಪರಿವರ್ತನೆಯಾಗುವುದು ಹೀಗೆ. ಕತೆಯ ಸಂರಚನೆ ಮತ್ತು ಅಂಶಗಳನ್ನು ಕುರಿತ ಚರ್ಚೆಯೂ ನಡೆಯಿತು. ಕತೆಯ ಭಾಷೆಯನ್ನು ಕುರಿತೂ ಚರ್ಚೆಯಾಯಿತು. ನಂತರ ಶಿಬಿರಾರ್ಥಿಗಳು ಪರಸ್ಪರ ಚರ್ಚಿಸಿಕೊಂಡು, ವಿಷಯಗಳನ್ನು ಹಂಚಿಕೊಂಡು ಕತೆಯನ್ನು ಪುನಃ ಬರೆದರು.

## ಶಿಬಿರಾರ್ಥಿಗಳ ಅಭಿಪ್ರಾಯಗಳು

ನೈಜ ಸಂಪನ್ಮೂಲಗಳನ್ನು ತರಗತಿಯ ಬೋಧನೆಯಲ್ಲಿ ಬಳಸಿಕೊಳ್ಳಬೇಕು, ಏಕೆಂದರೆ ಅವು ವಾಸ್ತವ ಬದುಕಿಗೆ ಸಂಬಂಧ ಕಲ್ಪಿಸುತ್ತವೆ ಎಂದು ಅವರು ಅಭಿಪ್ರಾಯಪಟ್ಟರು. ನೈಜ ಸಂಪನ್ಮೂಲಗಳು ವಿದ್ಯಾರ್ಥಿಗಳ ಸೃಜನಶೀಲತೆಯನ್ನು, ಶಬ್ದಸಂಪತ್ತನ್ನು ಮತ್ತು ವಿಶ್ಲೇಷಣಾತ್ಮಕ ಚಿಂತನೆಯನ್ನು ಹಿಗ್ಗಿಸುತ್ತವೆ ಎಂದು ಅವರಿಗೆ ಅನಿಸಿತು. ವಾಸ್ತವ ಬದುಕಿನ ಸಂಪನ್ಮೂಲಗಳು ಮತ್ತು ಬರವಣಿಗೆಯನ್ನು ಒಂದು ಪ್ರಕ್ರಿಯೆಯಂತೆ ರೂಪಿಸುವ ವಿಧಾನವು ಕಲಿಕೆಯ ಒಂದು ಸಂಪೂರ್ಣ ಅನುಭವವನ್ನು

ಕೊಟ್ಟಿತು, ಅದು ಮನಸ್ಸಿಗೆ ಆನಂದವನ್ನೂ ಶೈಕ್ಷಣಿಕ ಒಳನೋಟಗಳನ್ನೂ ಕೊಟ್ಟಿತು. ಇದು ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಬ್ಬರಿಗೂ ಪ್ರಯೋಜನವಾಗುತ್ತದೆ. ಉನ್ನತ ಮಟ್ಟದ ಆಲೋಚನಾ ಕೌಶಲಗಳನ್ನು ಬೆಳೆಸಿಕೊಳ್ಳಲು ಈ ರೀತಿಯ ಸಂವಹನಾತ್ಮಕ (ಪರಸ್ಪರ ಕೊಡುಕೊಳೆಯ) ಚಟುವಟಿಕೆಗಳು ವಿದ್ಯಾರ್ಥಿಗಳಿಗೂ ಇಷ್ಟವಾಗುತ್ತವೆ. ಶಾಲೆಯ ಹೊರಗಿನ ಬದುಕಿನಲ್ಲಿ ತಾವು ಓದಿದ್ದನ್ನು ತರಗತಿಯೊಂದಿಗೆ ಸಂಪರ್ಕಿಸಿ ವ್ಯಾಖ್ಯಾನಿಸಲು ಸಾಧ್ಯವಾದಾಗ ವಿದ್ಯಾರ್ಥಿಗಳಿಗೆ ಅದು ಒಂದು 'ಆಹಾ' ಗಳಿಗೆಯಾಗಿರುತ್ತದೆ. ತರಗತಿಯ ಜಗತ್ತು ಮತ್ತು ಮನೆಯ (ಅಥವಾ ಹೊರಗಿನ) ಜಗತ್ತನ್ನು ತರಗತಿಯೊಳಗೆ ಸಂಪರ್ಕಿಸುವ ಮೂಲಕ ವಾಸ್ತವಿಕತೆಯು (authenticity) ಮುಂದುವರೆದುಕೊಂಡು ಹೋಗುವಂತೆ ಆಗುತ್ತದೆ.

ವಾಸ್ತವ ಬದುಕಿನ ಸಂಪನ್ಮೂಲಗಳನ್ನು ಬಳಸಿ ಬರವಣಿಗೆಯನ್ನು ಒಂದು ಪ್ರಕ್ರಿಯೆಯಂತೆ ಭಾವಿಸಿ ಸಂವಹನಾತ್ಮಕವಾಗಿ ಕಲಿಸುವ ವಿಧಾನದಿಂದ (ವರದಿಗಳು, ಜಾಹಿರಾತುಗಳು ಮತ್ತು ಭಿತ್ತಿಚಿತ್ರಗಳಂತಹ ವಾಸ್ತವ ಬದುಕಿನಿಂದ ಆಯ್ದ ಬರಹದ ಮಾದರಿಗಳನ್ನು ಬಳಸಿ) ಈ ಕೆಳಗಿನ ತತ್ವಗಳನ್ನು ನಾವು ಕಲೆ ಹಾಕಿದೆವು.

1. ಭಾಷಾ ಕಲಿಕೆಗೆ ಭಾಷಾ ಪರಿಸರವೊಂದು ಬೇಕು. ವಾಸ್ತವ ಬದುಕಿಗೆ ಸಂಬಂಧಿಸಿದ ಎಲ್ಲಾ ಬಗೆಯ ಸಂಪನ್ಮೂಲಗಳು/ಸಾಮಗ್ರಿಗಳು ಲಭ್ಯವಿರುವ ಭಾಷಾ ಪರಿಸರವೊಂದರಲ್ಲಿ ನಾವು ಮುಳುಗಿದಾಗ ಭಾಷಾ ಕಲಿಕೆಯು ಸಾಧ್ಯವಾಗುತ್ತದೆ. ಅಲ್ಲಿ ನಮ್ಮ ಕಲಿಕೆಯನ್ನು ಗುರುತಿಸುವ, ನಮ್ಮನ್ನು ಭಾಷಾ ಕಲಿಕೆಯ ಚಟುವಟಿಕೆಗಳಲ್ಲಿ ತೊಡಗಿಸುವ ಮತ್ತು ಭಾಷೆಯನ್ನು ಬಳಸಲು ಹೇರಳ ಅವಕಾಶಗಳನ್ನು ಒದಗಿಸುವವರೊಬ್ಬರು ಬೇಕಾಗುತ್ತದೆ.
2. ಸದಾ ತಪ್ಪುಗಳನ್ನು ತಿದ್ದುತ್ತ ಇರುವುದರಿಂದ ಭಾಷಾ ಕಲಿಕೆಯು ಸಾಧ್ಯವಾಗದು. ತಪ್ಪುಗಳು ಭಾಷಾ ಕಲಿಕೆಯ ಮೆಟ್ಟಿಲುಗಳು.
3. ನಿರಂತರವಾಗಿ ಅರ್ಥಪೂರ್ಣ ಚಟುವಟಿಕೆಗಳನ್ನು ಮಾಡುತ್ತ, ಸಾಮರ್ಥ್ಯವನ್ನು ಬೆಳೆಸುವ ಹಲವಾರು ಅವಕಾಶಗಳೊಂದಿಗೆ ನಮಗೆ ಭಾಷೆಯನ್ನು ಬಳಸಲು ಹೇರಳ ಅವಕಾಶಗಳು ಬೇಕಾಗುತ್ತವೆ.

ಆದರೆ ಈ ಕೆಳಗಿನ ಪತ್ರವು ನನ್ನ ದಿನವನ್ನು ಸಾರ್ಥಕಗೊಳಿಸಿತು, ಖುಷಿಯನ್ನು ಇಮ್ಮಡಿಗೊಳಿಸಿತು.

*ಗೌರವಾನ್ವಿತ ಮೇಡಮ್,*

*'ತರಗತಿಯಲ್ಲಿ ವಾಸ್ತವ ಬದುಕಿನ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸುವುದರ' ಕುರಿತ ಕಾರ್ಯಾಗಾರದಲ್ಲಿ ಭಾಗವಹಿಸಿದ್ದು ನನ್ನ ಅದೃಷ್ಟವೆಂದು ತಿಳಿಯುತ್ತೇನೆ. ಇವತ್ತು 7ನೇ ತರಗತಿಯ ಮಕ್ಕಳಿಗೆ ನಾನು ವೃತ್ತಪತ್ರಿಕೆಯ ವರದಿಯೊಂದನ್ನು ಕೊಟ್ಟು ವರದಿ ಬರೆಯುವುದನ್ನು ಕಲಿಸಿದೆ. ಅದು ಎಷ್ಟು ಪರಿಣಾಮಕಾರಿಯಾಗಿತ್ತೆಂದರೆ, ಸುದೀರ್ಘವಾದ ವಿವರಣೆಯ ಅಗತ್ಯವಿಲ್ಲದೆಯೆ ಮಕ್ಕಳು ಬಹುಬೇಗನೇ ಅದನ್ನು ಕಲಿಯಲು ಸಾಧ್ಯವಾಯಿತು. ನಾನು ವರದಿಯ ಪ್ರತೀ ಸಾಲನ್ನೂ ಓದುತ್ತ ಹೋದೆ ಮತ್ತು ಅದರಲ್ಲಿ ನಿಜಸಂಗತಿಗಳು ಮತ್ತು ಅಭಿಪ್ರಾಯಗಳನ್ನು ಬೇರೆ ಬೇರೆ ಮಾಡುವಂತೆ ಮಕ್ಕಳಿಗೆ ಹೇಳಿದೆ. ನೀವು ಕಾರ್ಯಾಗಾರದಲ್ಲಿ ಕಲಿಸಿದಂತೆ ವರದಿಯ ಪ್ರಸ್ತಾವನೆಯ ವಿನ್ಯಾಸ, ಒಳ ಅಂಶಗಳು ಮತ್ತು ಪರಿಹಾರದ ಭಾಗಗಳನ್ನೂ ಮಾಡಲಾಯಿತು. ಅದರ ಫಲಿತಾಂಶವು ಅದ್ಭುತವಾಗಿತ್ತು, ಮೇಡಮ್. ಆ ಚಟುವಟಿಕೆಯನ್ನು ಪರಿಚಯಿಸಿದ ನಿಮಗೆ ಬಹಳ ಕೃತಜ್ಞಳಾಗಿದ್ದೇನೆ. ವಿದ್ಯಾರ್ಥಿಯಂತೆ, ನಾನು ಮುಂದಿನ ಕಾರ್ಯಾಗಾರಕ್ಕೆ ಉತ್ಸುಕತೆಯಿಂದ ಕಾಯುತ್ತಿದ್ದೇನೆ.*

*ವಂದನೆಗಳು.*

***

**ಪರಾಮರ್ಶನಗಳು:**

Bedadur, N. 2016, February, Using Authentic Literature to Teach Writing: Pedagogy that Transforms Classroom Practice, Fortell Issue 34. http://www.fortell.org/content/using-authentic-literature-teach-writing-pedagogy-transforms-classroom-practice)

**ನಿವೇದಿತಾ ಬೆಡದೂರ್:** ಇವರು ಸಂದರ್ಶಕ ಶಿಕ್ಷಕಿಯಾಗಿ ಬೆಂಗಳೂರಿನ ಅಜೀಂ ಪ್ರೇಮ್ಜಿ ಯುನಿವರ್ಸಿಟಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಸ್ತುತ ಸಿಕ್ಕಿಂ ನಲ್ಲಿ ಆರಂಭಿಕ ಸಾಕ್ಷರತೆ, ಭಾಷಾ ಬೋಧನೆ, ಮಕ್ಕಳ ವಿಕಾಸ ಮತ್ತು ಕಲಿಕೆ ಕುರಿತು ಕಾರ್ಯಾಗಾರ, ತರಬೇತಿಗಳನ್ನು ನಡೆಸಿಕೊಡುವ ಮೂಲಕ ಪಠ್ಯಪುಸ್ತಕ ಬರೆಯಲು ಬೆಂಬಲ ನೀಡುತ್ತಿದ್ದಾರೆ. ಅವರ ಸಂಪರ್ಕಕ್ಕೆ: nivedita@azimpremjifoundation.org

ಅನುವಾದ: ಪ್ರಜ್ಞಾ ಎಲ್. ಎಸ್. : ಪರಿಶೀಲನೆ: ನಾಗಮಣಿ ಎಸ್. ಎನ್.